ಏರಿಕೆ ಕಂಡಿದೆ ಎಂದು 'ಮಿಂಡ್‌ಶೇರ್ ಇಂಡಿಯಾ' ಹಾಗೂ 'ವಿಡೂಲಿ' ವರದಿ ಮಾಡಿವೆ. ಹಾಗೆಯೇ 'ರೆಸಿಪಿ'ಗಾಗಿ ಯೂಟ್ಯೂಬ್ ತಡಕಾಡಿದವರ ಸಂಖ್ಯೆ ಶೇ 52ರಷ್ಟು ಹೆಚ್ಚಾಗಿದೆ. ಗೇಮ್ಸ್‌ಗೆ ಶೇ 23ರಷ್ಟು, ಇತರ ಮಾಹಿತಿ ಕಲೆಹಾಕಲು ಶೇ 42ರಷ್ಟು ಆನ್‌ಲೈನ್ ಬಳಕೆದಾರರ ಸಂಖ್ಯೆ ಹೆಚ್ಚಾಗಿದೆ.

## ಮನೆ ಊಟಕ್ಕೆ ಬೆಲೆ

'ಅಗತ್ಯ, ಅನಿವಾರ್ಯ ಎಷ್ಟೋ ಜನರನ್ನು ಅಡುಗೆಮನೆಗೆ ಕರೆತಂದಿತು' ಎನ್ನುತ್ತಾರೆ ಪಾಕಪ್ರಿಯ, ನಟ ಸಿಹಿಕಹಿ ಚಂದ್ರು.

'ಅಗತ್ಯ ಎನ್ನುವುದು ಹೊಸ ಹುಟ್ಟುಗಳ ತಾಯಿ ಇದ್ದಂತೆ. ಒಮ್ಮೆಲೆ ಲಾಕ್‌ಡೌನ್ ಆದಾಗ ಹೊರಗೆಲ್ಲೂ ಹೋಗದಂತಹ, ಊಟ ತಿಂಡಿಗೆ ಪರದಾಡುವಂತಹ ಸ್ಥಿತಿ ಎದುರಾಯಿತು. ಆಗ ಒಂದು ರೀತಿಯ ಅನಿವಾರ್ಯ ಸೃಷ್ಟಿಯಾಯಿತು. ಗಂಡುಮಕ್ಕಳೇ ಅಲ್ಲ; ಎಷ್ಟೋ ಹೆಣ್ಣುಮಕ್ಕಳಿಗೆ ಅಡುಗೆ ಮಾಡುವುದಕ್ಕೆ ಬರುತ್ತಿರಲಿಲ್ಲ. ಏನಿದ್ದರೂ ಹೊರಗಡೆ ತಿನ್ನುವ ರೂಢಿ ಇಟ್ಟುಕೊಂಡಿದ್ದರು. ಲಾಕ್‌ಡೌನ್ ಅದೆಲ್ಲವನ್ನೂ ಮನೆಯಲ್ಲೇ ಮಾಡುವಂತೆ ಕಲಿಸಿತು' ಎನ್ನುವರು ಚಂದ್ರು.



'ಮನೆ ಊಟಕ್ಕೆ ಒಂದು ಬೆಲೆ ಬಂದದ್ದು ಲಾಕ್‌ಡೌನ್ ಸಮಯದಲ್ಲಿ. ಮನೆ ಊಟವೇ ಆರೋಗ್ಯಪೂರ್ಣ. ಸುರಕ್ಷಿತ, ರುಚಿಕರ ಎಂಬ ಅರಿವು ಎಲ್ಲರಲ್ಲೂ ಮೂಡಿದೆ. ಮನೆ ಸದಸ್ಯರೆಲ್ಲರೂ ಒಟ್ಟಿಗೆ ಕುಳಿತು ಊಟ ಮಾಡಬೇಕು ಎನ್ನುವ ಭಾವನೆ ಈಗ ಬಹುತೇಕರಲ್ಲಿ ಬಂದಿದೆ. ಹಾಗಾಗಿ ಲಾಕ್‌ಡೌನ್ ನೀಡಿದ ಅದ್ಭುತ ಸಹಾಯ ಏನೆಂದರೆ ಕುಟುಂಬವನ್ನು ಒಗ್ಗೂಡಿಸಿದ್ದು. ಮನೆಗೆ ಅಡುಗೆ ಕೋಣೆ ಕೇಂದ್ರವಿದ್ದಂತೆ. ಎಲ್ಲವೂ ಆರಂಭವಾಗುವುದು ಅಲ್ಲಿಂದಲೇ. ಲಾಕ್‌ಡೌನ್ ಅಡುಗೆ ಮನೆಗೆ ಪ್ರಾಮುಖ್ಯ ತಂದುಕೊಟ್ಟಿತು' ಎಂದು ಚಂದ್ರು ಒತ್ತಿ ಹೇಳುವರು.

### ಹಳ್ಳಿಮನೆಗೂ ಯೂಟ್ಯೂಬ್ ಲಗ್ಗೆ

ಸಾಂಪ್ರದಾಯಿಕ ಅಡುಗೆಯೇ ಪ್ರಾಧಾನ್ಯವಾಗಿದ್ದ ಗ್ರಾಮೀಣ ಭಾಗಕ್ಕೂ ಯೂಟ್ಯೂಬ್‌ನ 'ಸಂಜೆ ಸ್ನ್ಯಾಕ್ಸ್' ಲಗ್ಗೆ ಇಟ್ಟಿವೆ. ನಗರ, ಪಟ್ಟಣಪ್ರದೇಶಗಳಿಗೆ ಹೋದಾಗ ಆಗೊಮ್ಮೆ, ಈಗೊಮ್ಮೆ ಸವಿಯುತ್ತಿದ್ದ ಗೋಬಿ, ಪಾನಿಪೂರಿ, ಬೇಲ್ ಪೂರಿ, ಎಗ್‌ರೈಸ್, ನೂಡಲ್ಸ್ ಎಲ್ಲವನ್ನೂ ಲಾಕ್‌ಡೌನ್ ಕಸಿದಿತ್ತು. ಆಗ ಹಳ್ಳಿಯ ಅಡುಗೆ ಮನೆಯಲ್ಲೂ ಗೋಬಿ, ಪಾನಿಪೂರಿ, ಮಸಾಲೆ ಪೂರಿಯ ವಾಸನೆ ಪಸರಿಸಿತು.

ಸ್ನ್ಯಾಕ್ಸ್ ತಯಾರಿಸಲು ಅಗತ್ಯವಾದ ಸಾಮಗ್ರಿಗಳನ್ನು ಗಂಡಂದಿರಿಗೆ ದುಂಬಾಲು ಬಿದ್ದು ಪೇಟೆಯಿಂದ ತರಿಸಿಕೊಳ್ಳುತ್ತಿದ್ದ ಮಹಿಳೆಯರು 'ಪೇಟೆಯ ತಿನಿಸ'ನ್ನು ರುಚಿಕರವಾಗಿ ಹಳ್ಳಿ ಮನೆಯಲ್ಲೇ ಮಾಡಲು ಶುರುವಿಟ್ಟರು. ನಗರ ಪ್ರದೇಶಗಳಿಂದ ಹಳ್ಳಿಗಳಿಗೆ ಮರಳಿದ ಹೆಣ್ಣುಮಕ್ಕಳೂ ಜತೆಗೂಡಿದರು. ಸಂಜೆಯಾಗುತ್ತಿದ್ದಂತೆ ಮನೆಯವರ ಬಾಯಿರುಚಿ ತಣಿಸಲು ಹಳ್ಳಿ ಹೆಣ್ಣುಮಕ್ಕಳೂ ಅಣಿಯಾದರು. ಹಳ್ಳಿಯಲ್ಲಿ ಕೇಳಬೇಕೆ. ಒಂದು ಮನೆಯಲ್ಲಿ ವಿಶೇಷವಾದ ತಿನಿಸು ಮಾಡಿದರೆ ಓಣಿಗೆಲ್ಲ ಪಸರಿಸುತ್ತದೆ. ಒಬ್ಬರಿಂದೊಬ್ಬರು ರೆಸಿಪಿ ಕೇಳಿಕೊಂಡು ಸಂಜೆ ಸ್ನ್ಯಾಕ್ಸ್‌ನ ಪ್ರಯೋಗಕ್ಕೆ ಇಳಿದರು. ನೆಟ್‌ವರ್ಕ್ ಸಿಗದ ಊರುಗಳಲ್ಲೂ 'ಯೂಟ್ಯೂಬ್' ತನ್ನ ಛಾಪು ಮೂಡಿಸಿದ್ದು ಚಮತ್ಕಾರವೇ ಸರಿ.

## ಅಪ್ಪನ ಕೈರುಚಿ; ಅಮ್ಮನಿಗೆ ಬಿಡುವು

ಲಾಕ್‌ಡೌನ್ ಹಲವು ಹೆಣ್ಣುಮಕ್ಕಳಿಗೆ ಖುಷಿ ತಂದುಕೊಟ್ಟಿದೆ. ದಿನವೂ ತಾವು ಮಾಡಿದ್ದ ಅಡುಗೆ ತಿಂದು ಬೇಸರವಾಗಿದ್ದ ಅವರಿಗೆ, ಮಕ್ಕಳು–ಪತಿ ಮಾಡಿದ ಖಾದ್ಯ ಖುಷಿಪಟ್ಟಿದೆ. ದಿನದ ಸ್ವಲ್ಪ ಸಮಯವಾದರೂ ಅಡುಗೆ ಮನೆಯಿಂದ 'ಬ್ರೇಕ್' ಸಿಕ್ಕಿತಲ್ಲ ಎಂದು ಸಮಾಧಾನಪಟ್ಟಿದ್ದಾರೆ. ಮಕ್ಕಳೂ ಅಪ್ಪನ ಕೈರುಚಿ ಸವಿದು ಸಂಭ್ರಮಿಸಿದ್ದಾರೆ. ಎಷ್ಟೋ ಪುರುಷರು ಸೌಟ್ ಹಿಡಿದು ಅಡುಗೆ ಮಾಡಿ ಮಕ್ಕಳ ಪಾಲಿಗೆ ನಳಮಹಾರಾಜರ ಪೋಜು ಕೊಟ್ಟಿದ್ದಾರೆ, ಮಕ್ಕಳನ್ನು ಖುಷಿಪಡಿಸಿದ್ದಾರೆ. ಆ ಕಾರ್ಯ ಲಾಕ್‌ಡೌನ್ ಮುಗಿದ ಬಳಿಕವೂ ಮುಂದುವರಿದಿದೆ. 'ಆ ದಿನ ಮಾಡಿದ ಸಮೋಸಾ ಮಾಡಿಕೊಡು ಅಪ್ಪ' ಎಂದು

### ಹೆಚ್ಚು ಹುಡುಕಿಸಿಕೊಂಡ ರೆಸಿಪಿಗಳು

ಇತರ ಸಮಯಕ್ಕಿಂತ ಕೊರೊನಾ ಆತಂಕದ ಸಮಯದಲ್ಲಿ ಅತಿ ಹೆಚ್ಚು ರೆಸಿಪಿಗಳನ್ನು ಜನರು ವೀಕ್ಷಿಸಿದ್ದಾರೆ ಎಂದು 'ಗೂಗಲ್ ಟ್ರೆಂಡ್ಸ್' ವರದಿ ಮಾಡಿದೆ. ಲಾಕ್‌ಡೌನ್ ಅವಧಿಯ 90 ದಿನಗಳಲ್ಲಿ ಅತಿಹೆಚ್ಚು ಗೂಗಲ್ ಆದ ಪದ 'ರೆಸಿಪಿ'. ನಂತರದ ಸ್ಥಾನವನ್ನು 'ಆರೋಗ್ಯ', 'ಲುಡೊ', 'ಸೆಕ್ಸ್ ಟಿಪ್ಸ್', 'ನೆಟ್‌ಫ್ಲಿಕ್ಸ್' ಪಡೆದುಕೊಂಡಿವೆ ಎಂದು ಗೂಗಲ್ ಟ್ರೆಂಡ್ಸ್ ವರದಿಗಳು ಹೇಳುತ್ತವೆ.

ಹೆಚ್ಚು ಹುಡುಕಿಸಿಕೊಂಡ ತಿನಿಸುಗಳನ್ನೂ ಅದು ಪಟ್ಟಿ ಮಾಡಿದೆ. ದಹಿ ವಡಾ, ಡಲ್ಗೋನಾ ಕಾಫಿ, ಪಾನಿಪೂರಿ, ಚಾಕೊಲೆಟ್ ಕೇಕ್, ಸಮೋಸಾ, ಜಿಲೇಬಿ, ಪನೀರ್, ದೋಕ್ಲಾ, ಬನಾನ ಬೇಕ್, ದೋಸಾ, ಪಿಜ್ಜಾ, ಚಿಕನ್ ಮಾಮ್ಸ್, ಐಸ್‌ಕ್ರೀಂ, ಗೋಬಿ – ಹೀಗೆ ಮೊದಲ ಹತ್ತು ಸ್ಥಾನದಲ್ಲಿ ಈ ತಿನಿಸುಗಳು ಗೂಗಲ್ ಆಗಿವೆ. ಪ್ರಾದೇಶಿಕಕ್ಕೆ ಅನುಗುಣವಾಗಿ ಗೂಗಲ್ ಟ್ರೆಂಡ್ ಪಡೆದುಕೊಂಡಿವೆ.

### ಅಡುಗೆ ಸುಲಭಗೊಳಿಸಿದ ಯೂಟ್ಯೂಬ್

ಮೊದಲೆಲ್ಲ ಹೊಸದಾಗಿ ಮದುವೆಯಾಗಿ ಗಂಡನ ಮನೆಗೆ ಬಂದ ಹೆಣ್ಣುಮಕ್ಕಳು ತಾಯಿಗೆ ಫೋನಾಯಿಸಿ ರೆಸಿಪಿ ಕೇಳಿ ಅಡುಗೆಗಳನ್ನು ತಯಾರಿಸುತ್ತಿದ್ದರು. ಆ ಸ್ಥಾನವನ್ನು ಈಗ ಯೂಟ್ಯೂಬ್ ಅಲಂಕರಿಸಿದೆ. ಎಂತಹ ಕಷ್ಟದ ಅಡುಗೆಯನ್ನೂ ಯೂಟ್ಯೂಬ್ 'ಗೆಳತಿ' ಸುಲಭವಾಗಿಸಿ ಕಲಿಸುತ್ತಾಳೆ. ಮಗಳೇ ತಾಯಿಗೆ ಅಡುಗೆಯಲ್ಲಿ ಅನುಸರಿಸಬೇಕಾದ ಸರಳ ವಿಧಾನಗಳನ್ನು ಹೇಳಿಕೊಡುವ ಮಟ್ಟಿಗೆ ಆಕೆಯನ್ನು ಯೂಟ್ಯೂಬ್ ಬೆಳೆಸಿದೆ. ಸಾಂಬಾರ್‌ಪುಡಿ, ಚಟ್ನಿಪುಡಿಯಿಂದ ಹಿಡಿದು ಪೀಜ್ಝಾ, ಬರ್ಗರ್‌ಗಳನ್ನೂ ಆಕೆ ಸುಲಭದಲ್ಲಿ ಮಾಡಲು ಕಲಿತಿದ್ದಾಳೆ.